[ Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 500/2023**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 4

ಸಾಕ್ಷಿದಾರಳ ಹೆಸರು : ಪ್ರೇಮಲತಾ

ಗಂಡನ ಹೆಸರು : ದುಗ್ಗಣ್ಣ ಪೂಜಾರಿ

ಪ್ರಾಯ : 57 ವರ್ಷ

ಉದ್ಯೋಗ : ಗೃಹಿಣಿ

ವಾಸ : ಕಲ್ಯಾ

ದಿನಾಂಕ 03.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಆರೋಪಿತರ ಪರಿಚಯ ಇರುತ್ತದೆ. 1 ನೇ ಆರೋಪಿಯು ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು 1 ನೇ ಆರೋಪಿಯನ್ನು ಗುರುತಿಸಲು ಯಾವುದೇ ತಕಾರು ಇಲ್ಲ ಎಂದು 1 ನೇ ಆರೋಪಿ ಪರ ವಕೀಲರು ನುಡಿದಿರುತ್ತಾರೆ.

ಚಾಸಾ-1, 2, 3 ಮತ್ತು 5 ರವರ ಪರಿಚಯ ಇರುತ್ತದೆ.

ದಿಃ03.12.2022 ರಂದು ರಾತ್ರಿ 11.00 ಗಂಟೆಗೆ ನಮ್ಮ ದನಗಳಿಗೆ ಹುಲ್ಲು ಹಾಕಿ ಮಲಗಲು ಹೋಗುವಾಗ ನನ್ನ ತಮ್ಮ 2 ನೇ ಆರೋಪಿಯ ಗಂಡ ಮನೆಗೆ ಬಂದು ಚಾಸಾ-1 ರವರ ಚಿನ್ನಗಳನ್ನು ಕಳ್ಳರು ದೋಚಿಕೊಂಡು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ನನ್ನ ತಂಗಿಯ ಬಳಿ ಹೇಳಿ ಚಾಸಾ-1 ರವರ ಮನೆಗೆ ಹೋಗಿರುತ್ತೇನೆ. ನಾನು ಅಲ್ಲಿ ಹೋಗಿ ನೋಡಿದಾಗ ಚಾಸಾ-1 ರವರು ಅಳುತ್ತಿದ್ದರು, ಸ್ವಲ್ಪ ಸಮಯದ ನಂತರ ಪೊಲೀಸರನ್ನು ಚಾಸಾ-2 ರವರು ಕರೆದುಕೊಂಡು ಬಂದರು. ನಾವು ಹೋಗಿ ನೋಡುವಾಗ ಚಾಸಾ-1 ರವರ ಮನೆಯ ಹೊರಗಡೆಯ ಬಲ್ಬನ್ನು ತೆಗೆದಿದ್ದರು. ನಂತರ ನಾವು ಹುಡುಗನಲ್ಲಿ ಹೇಳಿ ಬಲ್ಬನ್ನು ಹಾಕಿಸಿದ್ದೇವು. ಪೊಲೀಸರು ಬರುವಾಗ ನಾವು ಹೊರಗಡೆ ಇದ್ದೇವು.

ಪೊಲೀಸರು ಬಂದ ನಂತರ ಚಾಸಾ-1 ರವರನ್ನು ಕರೆದುಕೊಂಡು ಮನೆಯ ಒಳಗೆ ಹೋಗಿರುತ್ತಾರೆ. ಮನೆಯ ಒಳಗೆ ಡಬ್ಬದಲ್ಲಿ ಹಾಕಿದ್ದ ಚಿನ್ನದ ಒಡವೆಗಳನ್ನು ದೋಚಿಕೊಂಡು ಹೋಗಿದ್ದರು ಬಟ್ಟೆಗಳು ಚಲ್ಲಾಪಿಳ್ಳಿಯಾಗಿತ್ತು. ಪೊಲೀಸರು ನಮ್ಮಲ್ಲಿ ಯಾವುದೆಲ್ಲ ಚಿನ್ನಗಳು ಇತ್ತು ಎಂದು ಕೇಳಿದರು. 2 ನೇ ಆರೋಪಿಯು ಚಿನ್ನದ ಫೋಟಗಳನ್ನು ತೋರಿಸಿ ಯಾವುದೆಲ್ಲ ಚಿನ್ನ ಇತ್ತು ಎಂದು ತಿಳಿಸುತ್ತಿದ್ದರು ಹಾಗೂ 2 ನೇ ಅರೋಪಿತೆಯ ಮಗಳು ಸದರಿ ವಿಚಾರವನ್ನು ಬರೆದು ನೀಡಿದರು. 13 ಚಿನ್ನದ ಒಡೆವ ಮತ್ತು ಒಂದು ಬೆಳ್ಳಿಯು ಒಡವೆ ಕಳುವಾಗಿದೆ ಎಂದು ತಿಳಿದುಬಂತು. ಪೊಲೀಸರು ನಮ್ಮನ್ನು ವಿಚಾರಿಸಿ ಸಹಿಯನ್ನು ಪಡೆದುಕೊಂಡಿರುತ್ತಾರೆ. ಮೊದಲು ಚಾಸಾ-21 ರವರು ಬಂದಿದ್ದರು ನಂತರ ಚಾಸಾ-21 ರವರ ಹಿರಿಯ ಅಧಿಕಾರಿಗಳು ಬಂದರು. ನಂತರ ಮರುದಿನ ತನಿಖೆಯನ್ನು ಮಾಡಿರುತ್ತಾರೆ. ದಿಃ04.12.2022 ರಂದು ಮಹಜರು ಮಾಡಿರುತ್ತಾರೆ. ನಾನು ಬರುವಾಗ ಸ್ವಲ್ಪ ತಡವಾಗಿತ್ತು. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ಯಾವುದೆ ಮರುಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> : <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಕಳುವಾದ ದಿನ ಚಾಸಾ-1 ಮತ್ತು 2 ರವರು ಕಳುವಾದ ಒಡವೆಗಳ ವಿವರಗಳನ್ನು ಪೊಲೀಸರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಚಾಸಾ-1 ರವರು ಅಳುತ್ತಿದ್ದರು 2 ನೇ ಆರೋಪಿ ತಿಳಿಸುತ್ತಿದ್ದರು.

ದಿಃ21.12.2022 ರಂದು ಚಾಸಾ-1 ರವರು ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಪೊಲೀಸರು ಆರೋಪಿತರನ್ನು ತೋರಿಸಿ ಇವರೇ ಕಳ್ಳತನ ಮಾಡಿರುತ್ತಾರೆ ಅದನ್ನು ಆರೋಪಿತರು ಒಪ್ಪಿ ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಂದ ವಶಪಡಿಸಿಕೊಂಡ ಬಂಗಾರದ

ಒಡವೆಗಳನ್ನು ನೋಡಿರುತ್ತೇನೆ ಎಂದರೆ ಸರಿ. ದಿಃ21.12.2022 ರಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸಾಕ್ಷಿಯು 2 ನೇ ಆರೋತೆಯನ್ನು ಮನೆಗೆ ಕರೆದುಕೊಂಡು ಬಂದಿದ್ದರು ಆಗ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಮು ಮಾ-1 ರಿಂದ 3 ನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಸರಿ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> ಃ ಆರೋಪಿತರ ಪರ ಃ ಶ್ರೀ ಎಸ್ ಕೆ ವಕೀಲರಿಂದ ಃ

2 ನೇ ಆರೋಪಿಯು ನನ್ನ ತಮ್ಮನ ಹೆಂಡತಿ. ನಾವು ಒಟ್ಟು 9 ಜನ ಮಕ್ಕಳು. ನಾನು ನನ್ನ ತಾಯಿಯ ಮನೆಯಲ್ಲಿ ಇರುತ್ತೇನೆ. ಪ್ರಸ್ತುತ ನಮ್ಮ ಮನೆಯಲ್ಲಿ 8 ಜನ ಇರುತ್ತೇವೆ. ಮದುವೆಯಾದ 4 ಜನ ಅಣ್ಣತಮ್ಮಂದಿರು ನಮ್ಮ ಮನೆಯಲ್ಲಿ ಇಲ್ಲ ಎಂದರೆ ಸರಿ. ನನ್ನ ಗಂಡ ಮುಂಬೈಯಲ್ಲಿ ಇರುತ್ತಾರೆ. ಸುಮಾರು 6 ವರ್ಷಗಳಿಂದ 2 ನೇ ಆರೋಪಿತರು ಹಾಗೂ ಅವರ ಗಂಡ ಬೇರೆ ಮನೆ ಮಾಡಿಕೊಂಡಿರುತ್ತಾರೆ.

ಮೂರ್ತೆದಾರರ ಹಣಕಾಸು ಸೊಸೈಟಿಯಲ್ಲಿ ಮೊದಲು ಕ್ಲರ್ಕ್ ಆಗಿ ನಂತರ ಮ್ಯಾನೇಜರ್ ಆಗಿದ್ದೆ. 2 ನೇ ಆರೋಪಿತರ ಗಂಡ ಸದರಿ ಸಂಸ್ಥೆಯಲ್ಲಿ ನಿರ್ದೇಶಕರಾಗಿದ್ದರು ಎಂದರೆ ಸರಿ. ವಸಂತ ಪೂಜಾರಿಯವರು ಸದರಿ ಸಂಸ್ಥೆ ಕಾರ್ಯದರ್ಶಿಯಾಗಿದ್ದರು ಎಂದರೆ ಸರಿ. ನಾನು ಮತ್ತು ವಸಂತ ಪೂಜಾರಿ ಸೇರಿ ಸಂಸ್ಥೆಯಲ್ಲಿ ಅವ್ಯಹಾರ ನಡೆಸಿರುತ್ತೇವೆ ಎಂದರೆ ಸರಿಯಲ್ಲ. ಈ ರೀತಿ ಅವವಹಾರ ಮಾಡಿದ್ದರಿಂದ ವಸಂತ ಪೂಜಾರಿಯವರನ್ನು ಸಂಸ್ಥೆಯಿಂದ ಉಚ್ಚಾಟನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಸಂತ ಪೂಜಾರಿಯವರ ಮಾತು ಕೇಳಿ ನಾನು ಸಹ ಸದರಿ ಸಂಸ್ಥೆಗೆ ರಾಜೀ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಸಮಯದಲ್ಲಿ 2 ನೇ ಆರೋಪಿಯ ಗಂಡ ಸೊಸೈಟಿ ಪರವಾಗಿ ನಿಂತಿದ್ದರು ಎಂದರೆ ಸರಿಯಲ್ಲ. ಈ ಕಾರಣದಿಂದಾಗಿ ನಿಮಗೆ 2 ನೇ ಆರೋಪಿಯ ಮೇಲೆ ಸಿಟ್ಟು ಇದೆ ಎಂದರೆ ಸರಿಯಲ್ಲ. ನಾನು ಮನೆಯಲ್ಲಿ ಜಗಳವನ್ನು ಮಾಡಿ ನನ್ನ ತಮ್ಮಂದಿರನ್ನು ಹಾಗೂ ಅವರ ಹೆಂಡತಿಯನ್ನು ಮನೆಯಿಂದ ಹೊರಗೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಸುಮಾರು 5-6

ವರ್ಷಗಳಿಂದ ನನಗೂ ಮತ್ತು 2 ನೇ ಆರೋಪಿ ಮತ್ತು ಆಕೆಯ ಗಂಡನೊಂದಿಗೆ ಮಾತುಕತೆ ಇಲ್ಲ ಎಂದರೆ ಸರಿಯಲ್ಲ.

ನಮ್ಮ ಮನೆಯಿಂದ ಚಾಸಾ-1 ರವರ ಮನೆಗೆ 3-4 ನಿಮಿಷದ ರಸ್ತೆ. ಅವರ ಮಾತುಕತೆಗಳು ನಮ್ಮ ಮನೆಗೆ ಕೇಳಿಸುವುದಿಲ್ಲ. ನನಗೆ ಕಳುವಾದ ವಿಷಯ ಗೊತ್ತಿಲ್ಲ. ನಾನು 11.20 ಗಂಟೆಗೆ ಘಟನೆ ನಡೆದಿದೆ ಎಂದು ಹೇಳಲಾದ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಘಟನೆ ನಡೆದಿದೆ ಎಂದು ಹೇಳಲಾದ ಸ್ಥಳಕ್ಕೆ ಹೋದ ನಂತರ ಪೊಲೀಸರು ಬಂದಿರುತ್ತಾರೆ. ಮೊದಲು ವಿದ್ಯಾ ಮತ್ತು ಅವರೊಂದಿಗೆ ಇಬ್ಬರು ಪೊಲೀಸರು ಬಂದರು ನಂತರ ಚಾಸಾ-21 ರವರೊಂದಿಗೆ ಇಬ್ಬರು ಬಂದಿರುತ್ತಾರೆ. ನಂತರ 10 ನಿಮಿಷ ಬಿಟ್ಟು ಬೆರಳಚ್ಚು ತಜ್ಞರು ಹಾಗೂ ಚಾಸಾ-21 ರವರ ಹಿರಿಯ ಅಧಿಕಾರಿಗಳು ಬಂದಿರುತಾರೆ.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದರಿದ ಪಾಟೀ ಸವಾಲಿಗೆ ಸಮಯವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ